ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1188
2. ಸದಸ್ಯರ ಹೆಸರು : ಶ್ರೀ ಹೆಚ್. ಎಂ. ರಮೇಶ ಗೌಡ
3. ಉತ್ತರಿಸಬೇಕಾದ ದಿನಾಂಕ : 23-12-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಮೇಕೆದಾಟು ಯೋಜನೆ ಕಳೆದ ಹತ್ತಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಮೇಕೆದಾಟು ಯೋಜನೆಯನ್ನು ಕಾರ್ಯಗತಗೊಳಿಸಲು ಈ ಕೆಳಕಂಡ ಸಕ್ಷಮ ಪ್ರಾಧಿಕಾರಗಳ ಅಗತ್ಯ ತೀರುವಳಿಗಳನ್ನು ಪಡೆಯಲು ಕ್ರಮವಹಿಸಲಾಗಿದೆ :- i. ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳಿಂದ. ii. Environmental Impact Assessment (EIA) & Environmental Management Plan (EMP) ವರದಿಗಳನ್ನು ತಯಾರಿಸಲು Terms of Reference (ToR) ಅರ್ಜಿಗೆ ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆಯ ಸಚಿವಾಲಯದ (MoEF & CC) ಅನುಮೋದನೆ. iii. ವನ್ಯಜೀವಿ, ಅರಣ್ಯ ಹಾಗೂ ಪರಿಸರದ ಶಾಸನಬದ್ಧ ತೀರುವಳಿಗಳು. ಮುಂದುವರೆದು, ಸದರಿ ಯೋಜನೆಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ (1) Miscellaneous Application No.3127/2018, (2) Miscellaneous Application (Diary) No.20271/2021 ಹಾಗೂ (3) Civil Application No.5608/2021 ಪ್ರಕರಣಗಳು ಬಾಕಿ ಇರುತ್ತವೆ.
ಆ	ಈ ಯೋಜನೆಯಿಂದ ಬೆಂಗಳೂರು ನಗರದ ಕುಡಿಯುವ ನೀರಿಗೆ ಹಾಗೂ ರೈತರಿಗೆ ವ್ಯವಸಾಯಕ್ಕೆ ದೊರೆಯಬಹುದಾದ ನೀರಿನ ಪ್ರಮಾಣವೆಷ್ಟು;	ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಯಲ್ಲಿ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿರುವ ಕಾವೇರಿ ಜಲಾನಯದಲ್ಲಿನ ಪ್ರದೇಶಗಳ ಕುಡಿಯುವ ಹಾಗೂ ಗೃಹೋಪಯೋಗಿ ಬಳಕೆಗಾಗಿ 4.75 ಟಿ.ಎಂ.ಸಿ (Consumptive use) ನೀರನ್ನು ಬಳಸಲು ಅವಕಾಶ ಕಲ್ಪಿಸಲಾಗಿದ್ದು, ವ್ಯವಸಾಯಕ್ಕೆ ನೀರಿನ ಹಂಚಿಕೆ ಇರುವುದಿಲ್ಲ.
ಇ	ಮುಳುಗಡೆಯಾಗಲಿರುವ ಅರಣ್ಯ ಮತ್ತು ಕೃಷಿ ಜಮೀನಿನ ವ್ಯಾಪ್ತಿ ಎಷ್ಟು; ಯಾವ ಕಾಲಮಿತಿಯೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು?	ಪ್ರಸ್ತಾಪಿತ ಯೋಜನೆಗೆ ಒಟ್ಟಾರೆಯಾಗಿ 5257.03 ಹೆ. ಪ್ರದೇಶ ಅವಶ್ಯವಿದ್ದು, ವಿವರಗಳು ಕೆಳಗಿನಂತಿದೆ: (1) ಅರಣ್ಯ ಪ್ರದೇಶದಲ್ಲಿ –5096.21 ಹೆ. • ವನ್ಯಜೀವಿ ಪ್ರದೇಶ–4866.62 ಹೆ. • ಮೀಸಲು ಅರಣ್ಯ ಪ್ರದೇಶ –229.60 ಹೆ. (2) ರೆವೆನ್ಯು ಪ್ರದೇಶ–160.81 ಹೆ. ಮೇಲಿನಂತೆ, ಯೋಜನೆಯ ಪ್ರಸ್ತಾವನೆಗಳಿಗೆ ಸಂಬಂಧಪಟ್ಟ ಕೇಂದ್ರ ಸರ್ಕಾರದ ಮಂತ್ರಾಲಯಗಳಿಂದ ಅನುಮೋದನೆ ನಿರೀಕ್ಷಿಸಲಾಗಿದೆ.

ಸಂಖ್ಯೆ:ಜಸಂಇ 206 ಎಲ್‌ಎಲ್‌ಎ 2021

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು